# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 391 |
| ಸದಸ್ಯರ ಹೆಸರು | : | ಡಾ: ಚಂದ್ರಶೇಖರ್ ಬಿ.ಪಾಟೀಲ್(ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 15.09.2022 |
| ಉತ್ತರಿಸುವ ಸಚಿವರು | : | ಮಾನ್ಯ ಜಲಸಂಪನ್ಮೂಲ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಬೀದರ್ ಜಿಲ್ಲೆ ಕಾರಂಜಾ ಡ್ಯಾಂಗೆ ಸೂಕ್ತ ಭದ್ರತೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಡ್ಯಾಂಗೆ ಸೂಕ್ತ ಭದ್ರತೆ ಒದಗಿಸಲು ಸರ್ಕಾರ ಕೈಗೊಂಡ ಕ್ರಮವೇನು? | ಕಾರಂಜಾ ಅಣೆಕಟ್ಟಿನ ಭದ್ರತೆಗೋಸ್ಕರ, ಕಾರಂಜಾ ಅಣೆಕಟ್ಟಿನ ಆವರಣದಲ್ಲಿನ ಚಲನವಲನ/ಚಟುವಟಿಕೆಗಳನ್ನು ಅರಿಯಲು ಅಣೆಕಟ್ಟಿನ ಆವರಣದಲ್ಲಿ ಖಾಲಿ ಇದ್ದ ಉದ್ಯಾನವನ ಮತ್ತು ಅಣೆಕಟ್ಟಿನ ಒಡ್ಡಿನ ಪ್ರದೇಶವನ್ನು ಬೆಳಗಿಸಲು ಏರಿಯ ಉದ್ದಕ್ಕೂ 110 LED ವಿದ್ಯುತ್ ದೀಪಗಳನ್ನು ಅಳವಡಿಸಲಾಗಿದೆ ಮತ್ತು ಆವರಣದಲ್ಲಿ ಚಲನವಲನ ಮೇಲಿನ ನಿಗಾ ಇಡಲು 11 ಸಿ.ಸಿ. ಕ್ಯಾಮರಾಗಳನ್ನು ವಿವಿಧ ಸ್ಥಳಗಳಲ್ಲಿ ಅಳವಡಿಸಲಾಗಿದೆ.<br><br>ಪ್ರಸ್ತುತ, ಅಣೆಕಟ್ಟಿನ ಭದ್ರತೆಗಾಗಿ ಪೊಲೀಸ್ ಮಹಾ ನಿರ್ದೇಶಕರು, ಆಂತರಿಕ ಭದ್ರತಾ ವಿಭಾಗ ಕಛೇರಿಯಲ್ಲಿ ನೋಂದಾಯಿಸಿ, ಪರವಾನಗಿ ಪಡೆದ ಅರ್ಹ ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಿ, ಸುರಕ್ಷಾ Security Agency ಇವರೊಂದಿಗೆ ದಿನಾಂಕ:08.09.2021ರಂದು ಒಡಂಬಡಿಕೆ ಮಾಡಿಕೊಳ್ಳಲಾಗಿದ್ದು, ಅದರಂತೆ, ಸದರಿ ಭದ್ರತಾ ಸಂಸ್ಥೆಯಿಂದ ಅಣೆಕಟ್ಟಿಗೆ ಹಗಲು-ರಾತ್ರಿ ಸರದಿ ಪಾಳಿಯಂತೆ ಭದ್ರತೆ ಒದಗಿಸಲಾಗುತ್ತಿದೆ.<br><br>ಮುಂದುವರೆದು, ಕಾರಂಜಾ ಅಣೆಕಟ್ಟಿಗೆ ಪೊಲೀಸ್ ಭದ್ರತೆ ವ್ಯವಸ್ಥೆಗಾಗಿ ಈಗಾಗಲೇ ಮಾನ್ಯ ಪೊಲೀಸ್ ಮಹಾನಿರ್ದೇಶಕರು ಮತ್ತು ಮಹಾ ನಿರೀಕ್ಷಕರು, ಕರ್ನಾಟಕ ರಾಜ್ಯ ಪೊಲೀಸ್ ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. |
| (ಆ) | ಕಾರಂಜಾ ಡ್ಯಾಂನಲ್ಲಿ ಅನಾಮಧೇಯ ವ್ಯಕ್ತಿಗಳು ಅನುಮಾನಾಸ್ಪದ ರೀತಿಯಲ್ಲಿ ಓಡಾಡುತ್ತಿರುವುದರಿಂದ ಈ ಸಂಬಂಧ ಕೈಗೊಂಡಿರುವ ಸುರಕ್ಷಣಾ ಕ್ರಮಗಳೇನು? | |

ಜಸಂಇ 145 ಎಂಎಲ್ಎ 2022

(ಗೋವಿಂದ ಎಂ. ಕಾರಜೋಳ)
ಜಲಸಂಪನ್ಮೂಲ ಸಚಿವರು